ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ, ಇನ್ನೂ ಆನ್ವೇಷಣೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ. ಅನ್ವೇಷಣೆ ಮುಂಗಿದ ನಂತರ ಅವಶ್ಯಕ ಕ್ರಮ ತೆಗೆದುಕೊಳ್ಳಲಾಗುವುದು.

ಉ) ಪೌದು,

ತೀರ್ಥಹಳ್ಳಿ	೭೩೦೬೫
ಶೃಂಗೇರಿ	೧೮೫೨
ಕೊಪ್ಪ	೧೪೨೨
ತೀರ್ಥಹಳ್ಳಿ (ಅಣೆಕಟ್ಟು ಮೂರ್ವಾಡಿಗಾಗಿ)	೨೬೯
	೨೫.೩೨೮ ಎಕರೆಗಳು

ಊ) ತ. ಹಂತದಲ್ಲಿ ಉದ್ಭವಿಸುವುದಿಲ್ಲ.

ಕುಂದುಗೋಳ್ ತಾಲ್ಲೂಕಿನಲ್ಲಿರುವ ಶಾಲೆಗಳಿಗೆ ಜವಾನರುಗಳ ನೇಮಕಾತಿ

೨೦೧೧. ಶ್ರೀ ಬಿ. ಎ. ಉಪ್ಪಿನ (ಕುಂದಗೋಳ)—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಗೋಳ್ ತಾಲ್ಲೂಕು ಯರಗುಪ್ಪಿ, ಬೂದಿಹಾಳ ಹಾಗೂ ಹಿರೇಗುಂಜಾಳದಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಜವಾನರು ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಸದರಿ ಸರ್ಕಾರಿ ಪ್ರೌಢಶಾಲೆಗಳಿಗೆ ಕನಿಷ್ಠ ಒಬ್ಬ ಜವಾನರನ್ನು ನೇಮಕ ಮಾಡುವ ಉದ್ದೇಶದಿಂದ ನೇಮಕಾತಿ ನಿಯಮ ಪ್ರಕಾರ ಉದ್ಯೋಗ ವಿನಿಮಯ ಕೇಂದ್ರದ ಕಛೇರಿಯಿಂದ ಅಭ್ಯರ್ಥಿಗಳ ಪಟ್ಟಿ ತರಿಸಿ ೧೯೮೭ರ ಆಕ್ಟೋಬರ್ ತಿಂಗಳಲ್ಲಿ ಆಯ್ಕೆ ಮಾಡಲಾಗಿತ್ತು. ಆದರೆ, ಆರ್ಥಿಕ ಮಿತವ್ಯಯ ಕ್ರಮಗಳಿಂದಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಿರುವುದಿಲ್ಲ. ಈ ಬಗ್ಗೆ ಹೆಚ್ಚಿನ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸದನದ ಮುಂದೆ ಮಂಡಿಸುವುದು.

ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು ಈಗ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಸಪಲತ್ತು ನಾಲ್ಕನೇಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳ ನವಲತ್ತನಾಲ್ಕನೆ ಪಟ್ಟಿಯನ್ನೂ ಸಭೆಯ ಮುಂದೆ ಮಂಡಿಸಲಾಯಿತು.

ಮೈಸೂರು ನಗರದಲ್ಲಿರುವ ಪ್ರಾಥಮಿಕ ಶಾಲೆಗಳ ಬಗ್ಗೆ

೨೧೧೩. ಶ್ರೀ ಪಿ. ಎಂ. ಜಿಕ್ಕಬೋರಯ್ಯ (ಚಾಮರಾಜ),—ಪೂರ್ಣ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿ ಈಗ ಇರುವ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟುಮತ್ತು ಇವುಗಳಲ್ಲಿ ಎಷ್ಟಕ್ಕೆ ಸ್ವಂತ ಕಟ್ಟಡಗಳಿವೆ ?

ಆ) ಈ ಶಾಲೆಗಳಿಗೆ ಸೇರುವ ವಯೋಮಿತಿಯ ಮಕ್ಕಳ ಸಂಖ್ಯೆ ಎಷ್ಟು ?

ಇ) ಈಗಿರುವ ಅರ್ಹವಯಸ್ಸಿನ ಒಂಚಿನಲ್ಲಿರುವ ಮಕ್ಕಳನ್ನು ಸೇರಿಸಿಕೊಂಡು ಲೆಕ್ಕಹಾಕಿದರೆ ಈಗಿರುವ ಶಾಲೆಗಳಿಗಿಂತ ಎಷ್ಟು ಹೆಚ್ಚು ಶಿಶು ವಿಹಾರಗಳು ಮತ್ತು ಪ್ರಾಥಮಿಕ ಶಾಲೆಗಳೂ ಆಗತ್ಯವಿದೆ ?

ಈ) ಈ ಪೂರೈಕೆಗಾಗಿ ಎಷ್ಟು ಕಡೆ ಎಷ್ಟು ಶಾಲಾ ಕಟ್ಟಡಗಳನ್ನು ನಿರ್ಮಿಸಲು ಮಹತ್ ಯೋಜನೆ ಹಾಕಿಕೊಳ್ಳಲಾಗಿದೆ ?

ಶ್ರೀ ಬಿ. ಸೋಮಶೇಖರ್ (ಪೂರ್ಣ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಮೈಸೂರು ನಗರದಲ್ಲಿರುವ ಪೂರ್ವ ಪ್ರಾಥಮಿಕ ಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಈ ರೀತಿ ಇದೆ.

		ಸರ್ಕಾರಿ	ಖಾಸಗಿ	ಕಾರ್ಪೊರೇಷನ್
೧.	ಪೂರ್ವ ಪ್ರಾಥಮಿಕ ಶಾಲೆ	೧೩	೪೪	ಇಲ್ಲ
೨.	ಪ್ರಾಥಮಿಕ ಶಾಲೆಗಳು	೧೦೯	೬೫	ಇಲ್ಲ
		೧೨೨	೧೦೪	ಇಲ್ಲ

ಆ) ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ ೨೦ ಶಾಲೆಗೆ ಸ್ವಂತ ಕಟ್ಟಡವಿದೆ.
ಖಾಸಗಿ ಪ್ರಾಥಮಿಕ ಶಾಲೆಗಳ ಪೈಕಿ ೪೬ ಶಾಲೆಗಳಿಗೆ ಸ್ವಂತ ಕಟ್ಟಡವಿದೆ.

		ಮಕ್ಕಳ ಸಂಖ್ಯೆ		
		ಸರ್ಕಾರಿ	ಖಾಸಗಿ	ಕಾರ್ಪೊರೇಷನ್
೧.	ಪೂರ್ವ ಪ್ರಾಥಮಿಕ ಶಾಲೆ	೪೧೯	೭೮೦೦	—
೨.	ಪೂರ್ವ ಶಾಲೆಗಳು	೩೩,೩೪೨	೬೬೩೦೦	—

ಇ) ಕಡ್ಡಾಯ ಪ್ರಾಥಮಿಕ ಶಾಲೆ ನಿಯಮದ ಪ್ರಕಾರ ೧ನೇ ತರಗತಿಗೆ ಸೇರಲು ೫ ವರ್ಷ ೧೦ ತಿಂಗಳು ತುಂಬಬೇಕು. ಸ್ವಯಂ ಪ್ರೇರಣೆ ಮೇಲೆ ಸೇರಲು ೫ ವರ್ಷ ತುಂಬಿರಬೇಕು. ಈ ವಯಸ್ಸಿನ ಮಕ್ಕಳ ಸಂಖ್ಯೆ ಮೇಲಿನ ಪ್ರಶ್ನೆಯಲ್ಲಿ ತಿಳಿಸಿದೆ. ಮೈಸೂರು ನಗರ ಪ್ರದೇಶದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಹೆಚ್ಚಿನ ಸರ್ಕಾರಿ ಶಾಲೆ ಅವಶ್ಯಕತೆ ಇಲ್ಲ. ಖಾಸಗಿಯವರು ಎಷ್ಟು ಬೇಕಾದರೂ ನರ್ಸರಿ ಶಾಲೆ ಪ್ರಾರಂಭಿಸಬಹುದು: ಸರ್ಕಾರದ ನಿರ್ಬಂಧವಿಲ್ಲ. ಖಾಸಗಿಯವರಿಂದ ಹೊಸದಾಗಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಮುಂದೆ ಬಂದಲ್ಲಿ ಇಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.